ಕಪ್ಪುಹಣವನ್ನು ಬಯಲಿಗೆಳೆಯುವುದು ಇದರ ಮುಖ್ಯ ಉದ್ದೇಶ ಎಂದು ಸರ್ಕಾರವೇನೋ ಹೇಳುತ್ತಿದೆ. ಆದರೆ ಅದಕ್ಕಿಂತ ಮುಖ್ಯವಾಗಿ ಸುಮಾರು 7 ಲಕ್ಷ ಕೋಟಿ ರೂಪಾಯಿಗಳಷ್ಟು 'ಮರಳಿಬಾರದ ಸಾಲ'ದಿಂದ ಕಂಗಾಲಾಗಿರುವ ಸರ್ಕಾರಿ ವಲಯದ ಬ್ಯಾಂಕುಗಳಿಗೆ ಹಣದ ಪ್ರವಾಹ ಹರಿಸುವ ಕಾರ್ಯತಂತ್ರ ಇದು ಎನ್ನುವುದು ಎಲ್ಲರ ಗುಮಾನಿ. ಬ್ಯಾಂಕುಗಳಿಗೆ ಸಾಲ ಟೋಪಿ ಹಾಕಿರುವವರು ಬಹುತೇಕ ದೊಡ್ಡ ಉದ್ಯಮಿಗಳೇ. ಆದರೆ ಈಗ ಬ್ಯಾಂಕ್ ಖಾತೆಗೆ ಹಣ ತುಂಬುವವರು ಜನಸಾಮಾನ್ಯರು!

ನೋಟುಗಳ ಅಮಾನ್ಯದಿಂದ ಜನಸಾಮಾನ್ಯರಿಗೆ ಎಷ್ಟೇ ತೊಂದರೆ ಆಗಿದ್ದರೂ, ಬ್ಯಾಂಕುಗಳಿಗಂತೂ ಲಾಭವಾಗಿದೆ. ಈಗಾಗಲೆ 8 ಲಕ್ಷ ಕೋಟಿ ರೂಪಾಯಿಗಳಷ್ಟು ಹಣ ಹರಿದುಬಂದಿದೆ ಎನ್ನುವ ಅಂಕಿ ಅಂಶಗಳನ್ನೂ ಹಣಕಾಸು ಇಲಾಖೆ ಪ್ರಕಟಿಸಿದೆ. ಬ್ಯಾಂಕಿನಿಂದ ಜನರು ಮರಳಿ ಪಡೆಯುವ ಹಣಕ್ಕೆ ಮಿತಿ ವಿಧಿಸಿರುವ ಹಿನ್ನೆಲೆಯಲ್ಲಿ ಈಗ ಜನರು ಪದೇ ಪದೇ ಬ್ಯಾಂಕಿಗೆ ಬರಬೇಕಾಗಿದೆ. 'ನಿಮಗೆ ಬ್ಯಾಂಕಿಗೆ ಬರಲು ಮನಸ್ಸಿಲ್ಲವಾದಲ್ಲಿ, ಸಮಯ ಇಲ್ಲವಾದಲ್ಲಿ ಆನ್‌ಲೈನ್ ಬ್ಯಾಂಕಿಂಗ್ ಮಾಡಿ. ಸಣ್ಣ ಪುಟ್ಟ ಪಾವತಿಗಳಿಗೆ ಪ್ಲಾಸ್ಟಿಕ್ ಹಣವನ್ನು ಬಳಸಿ' ಎನ್ನುವುದು ಸರ್ಕಾರದ ಉಪದೇಶ. ಹಾಗೆಂದೇ ದೇಶದಲ್ಲಿ ಡಿಢೀರನೆ ಆನ್‌ಲೈನ್ ವಹಿವಾಟುಗಳು ಒಂದೇ ಸಮನೆ ಏರಿಕೆ ಕಂಡಿವೆ. ಅಥರೈಸ್ ಡಾಟ್ ನೆಟ್, ಪೇಪಾಲ್, ಗೂಗಲ್ ಚೆಕೌಟ್, ಅಮೆಜಾನ್ ಪೇಮೆಂಟ್ಸ್, ಡ್ವೊಲ್ಲಾ, ಸ್ಟ್ರೈಪ್, ಬ್ರೈನ್‌ಟ್ರೀ, ಪೇಟಿಎಂ... ಒಂದೇ ಎರಡೇ – ನಾವು ನೀವು ಯಾವತ್ತೂ ಕೇಳಿರದ ಎಷ್ಟೊಂದು ಕಂಪೆನಿಗಳು ಒಮ್ಮೊಂದೊಮ್ಮೆಲೆ ಉದಯಿಸಿವೆ. ಭರ್ಜರಿ ಬಿಸಿನೆಸ್ ಮಾಡುತ್ತಿವೆ. ಜನರೂ ಆನ್‌ಲೈನ್ ವಹಿವಾಟು ನೀಡುವ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದಾರೆ.




